SUCO BANK

# ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್

ಕಿರು ಸಾಲ ಯೋಜನೆಗಳ ಕೋಶ
ಪ್ರಧಾನ ಕಚೇರಿ
ಗಾಂಧಿ ನಗರ, ಬಳ್ಳಾರಿ

## ಸುಕೋ ಬ್ಯಾಂಕಿನ ಜಂಟಿ ಹೊಣೆಗಾರಿಕೆ ಗುಂಪುಗಳ ನಿರ್ವಹಣಾ ಯೋಜನೆ -೨೦೨೪

ಸುಕೋ ಬ್ಯಾಂಕಿನ ಐದು ಶಾಖೆಗಳು ಬ್ಯಾಂಕಿಂಗ್ ಸೇವಾ ಪೂರೈಕೆದಾರರ ಸಹಯೋಗದಲ್ಲಿ ಮಹಿಳಾ ಜಂಟಿ ಹೊಣೆಗಾರಿಕೆ ಗುಂಪುಗಳಿಗೆ ಸಾಲ ಪೂರೈಸಿದ್ದು, ಅವುಗಳ ಶಿಸ್ತುಬದ್ಧ ಉಸ್ತುವಾರಿ ಹಾಗು ನಿರ್ವಹಣೆಗಾಗಿ ವಿಶೇಷ ಯೋಜನೆವೊಂದನ್ನು ಬ್ಯಾಂಕು ಅನುಷ್ಠಾನಕ್ಕೆ ತರುತ್ತಿದೆ.

ಈ ಕಾರ್ಯ ಯೋಜನೆಯ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿಯ ಅಗತ್ಯವಿದ್ದು ,ಅವರನ್ನು ಬ್ಯಾಂಕಿಂಗ್ ಸೇವಾ ಪೂರೈಕೆದಾರರನ್ನಾಗಿ ನೇಮಿಸಿಕೊಳ್ಳಲು ಕ್ರಮ ತೆಗೆದುಕೊಂಡಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯವಿರುವ ಸಿಬ್ಬಂದಿಯ ನೇಮಕಾತಿಗಾಗಿ ಇರುವ ವಿವರಗಳು ಈ ಕೆಳಗಿನಂತಿವೆ.

ಬ್ಯಾಂಕಿಂಗ್ ಸೇವಾ ಪೂರೈಕೆದಾರರಾಗಿ ಆಯ್ಕೆಗೊಳ್ಳಲು ಪೂರೈಸಬೇಕಾಗಿರುವ ಅರ್ಹತೆಗಳು ಹಾಗು ಷರತ್ತುಗಳು :

ಅರ್ಹತೆಗಳು:

- ಎಸೆಸೆಲ್ಸಿ ಉತ್ತೀರ್ಣ ಅಥವಾ ಪಿಯುಸಿ (ಉತ್ತೀರ್ಣ ಅಥವಾ ಅನುತ್ತೀರ್ಣ) ಹಾಗೂ ಪದವೀಧರರು ಸೇವಾ ಪೂರೈಕೆದಾರರಾಗಿ ನಮ್ಮ ಬ್ಯಾಂಕಿನ ಗ್ರಾಹಕರಿಗೆ ಸೇವೆ ಸಲ್ಲಿಸಲು ಕಾಂಟ್ರ್ಯಾಕ್ಟ್ (ಗುತ್ತಿಗೆ) ಆಧಾರದ ಉದ್ಯೋಗಕ್ಕಾಗಿ ಅವಕಾಶವಿದೆ.
- ಅಭ್ಯರ್ಥಿಯ ವಾಸ ಸ್ಥಳದ ತಾಲ್ಲೂಕು/ನೆರೆ ಹೊರೆಯ ತಾಲ್ಲೂಕು ಅಥವಾ ಜೆಲ್ಲೆಯಲ್ಲಿ ಉದ್ಯೋಗ ನಿರ್ವಹಣೆಗೆ ಅವಕಾಶವಿದೆ
- ಯೋಜನೆಯ ಕಾರ್ಯವ್ಯಾಪ್ತಿಯ ಪ್ರದೇಶ: ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳು. ಈ ಜಿಲ್ಲೆಗಳಲ್ಲಿ ವಾಸವಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ಮಾಸಿಕ ನಿಶ್ಚಿತ ವೇತನ (ಫಿಕ್ಸೆಡ್ ಪೇ) ಮತ್ತು ಪರಿಶ್ರಮಯುತ (ಪರಫಾರ್ಮನ್ಸ್) ಕಾರ್ಯದ ಆಧಾರದ ಮೇಲೆ ಪ್ರೋತ್ಸಾಹ ಧನ, ಮೋಟಾರ ಸೈಕಲ್ ಅಲೋವೆನ್ಸ್ , ದಿನ ನಿತ್ಯದ ಅಲ್ಪ ವೆಚ್ಚವನ್ನೂ (ವೇರಿಯೇಬಲ್ ಪೇ) ನೀಡಲಾಗುವುದು.
- ಹುದ್ದೆಯ ಆಯ್ಕೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಇರುವುದಿಲ್ಲ. ಸಂದರ್ಶನದ ಮೂಲಕ ಅಭ್ಯರ್ಥಿಯ ಯೋಗ್ಯತೆ, ಕ್ಷಮತೆ ಮತ್ತು ಸೂಕ್ತತತೆಯನ್ನು ಮೌಲ್ಯಮಾಪನ ಮಾಡಲಾಗುತ್ತದೆ.
- ಸೇವಾ ಪೂರೈಕೆದಾರರಾಗಿ ಸೇವೆ ಸಲ್ಲಿಸಲು ನಿಗದಿಪಡಿಸಿದ ಅರ್ಜಿಯ ನಮೂನೆಯನ್ನು ಈ ವಿವರಗಳ ಕೊನೆಯಲ್ಲಿ ನೀಡಲಾಗಿದೆ.

ಷರತ್ತುಗಳು :

1. ವಯಸ್ಸು: ದಿನಾಂಕ 31-3-2026 ರಂದು ಅನ್ವಯಿಸುವಂತೆ ಕನಿಷ್ಠ **21** ವರ್ಷಗಳು ಮತ್ತು **40** ವರ್ಷಗಳಿಗೆ ಮೀರದಂತಿರಬೇಕು.
2. ವಿದ್ಯಾರ್ಹತೆ: ಎಸೆಸೆಲ್ಸಿ ಉತ್ತೀರ್ಣ ಅಥವಾ ಪಿಯುಸಿ (ಉತ್ತೀರ್ಣ ಅಥವಾ ಅನುತ್ತೀರ್ಣ) ಮತ್ತು ಭಾರತ ಸರ್ಕಾರದಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು.
3. ಉದ್ಯೋಗವು ಬ್ಯಾಂಕಿನೊಡನೆ ಗುತ್ತಿಗೆ ಒಪ್ಪಂದದ ಆಧಾರದ ಮೇಲೆ ಇರುವುದು. ಗುತ್ತಿಗೆ ಒಪ್ಪಂದವು ವಾರ್ಷಿಕ ನವೀಕರಣಕ್ಕಾಗಿ, ಅಭ್ಯರ್ಥಿಯ ತೃಪ್ತಿಕರ ಸೇವೆಯ ಮೇಲೆ ನಿರ್ಭರವಾಗಿದ್ದು ಅದನ್ನು ಕೂಲಂಕುಷ ಪರಿಶೀಲನೆಗೆ ಒಳಪಡಿಸಲಾಗುತ್ತದೆ .
4. ಬ್ಯಾಂಕಿನ ವ್ಯವಹಾರ ಮತ್ತು ಕಾರ್ಯ ಕಲಾಪಗಳು ಸಂಪೂರ್ಣ ಗಣಕೀಕೃತಗೊಂಡಿದ್ದು, ಬ್ಯಾಂಕಿನ ಯೋಜನೆಗಳ ಅರ್ಜಿಗಳು, ಕಾಗದ, ಪತ್ರಗಳ ಮಾಹಿತಿಯನ್ನು ಗ್ರಾಹಕರಿಗೆ ನೀಡಲು ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದುವ ಮತ್ತು ಬರೆಯುವ ಜ್ಞಾನ ಹೊಂದಿರುವವರಿಗೆ ಆದ್ಯತೆ.
5. ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಇರುವುದಿಲ್ಲ. ವಿದ್ಯಾರ್ಹತೆ, ವ್ಯಕ್ತಿಗತ ಸಂದರ್ಶನದಲ್ಲಿ ಬ್ಯಾಂಕಿನ ನಿರ್ದಿಷ್ಟ ಯೋಜನೆಗಾಗಿ ಬೇಕಾಗಿರುವ ಅಭ್ಯರ್ಥಿಯ ಯೋಗ್ಯತೆ, ಕ್ಷಮತೆ ಮತ್ತು ಸೂಕ್ತತತೆಯ ಮೌಲ್ಯಮಾಪನ ಮಾಡಲಾಗುವುದು
6. ಸಂದರ್ಶನದ ವೇಳೆಯಲ್ಲಿ ನಡೆಸಲ್ಪಡುವ ಭಾಷಾಜ್ಞಾನ ಕುರಿತು ಬರಹದ 15 ನಿಮಿಷಗಳ ಅವಧಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯವಾಗಿರುತ್ತದೆ.
7. ಅಭ್ಯರ್ಥಿಗಳು ಸೇವೆ ಸಲ್ಲಿಸಲು ಮೋಟಾರ್ ಸೈಕಲ್ ಅವಶ್ಯಕವಿದ್ದು , ಚಾಲ್ತಿಯಲ್ಲಿರುವ ಡ್ರೈವಿಂಗ್ ಲೈಸೆನ್ಸ್ ಇರಬೇಕು. ಅದಕ್ಕೆ ಇಂಧನ/ ಇಲೆಕ್ಟ್ರಿಕ್ ವಾಹನಗಳಿಗೆ ನಿರ್ವಹಣಾ ವೆಚ್ಚವನ್ನು ನೀಡಲಾಗುವುದು.
8. ಸೇವಾ ಪೂರೈಕೆದಾರನಾಗಿ ಆಯ್ಕೆ ಆಗುವ ಅಭ್ಯರ್ಥಿಯು ದಿನ ನಿತ್ಯದ ಸೇವೆಯಲ್ಲಿ ಬ್ಯಾಂಕಿನ ಆಪ್ ಮೂಕ ಆಯಾ ಗ್ರಾಹಕರು ನೀಡುವ ನಗದು ಹಣವನ್ನು ಅವರ ಖಾತೆಗೆ ಜಮಾ ಮಾಡಲು ಸ್ವೀಕರಿಸುವ ಬ್ಯಾಂಕಿಗೆ ಬಂದು ಜಮಾ ಮಾಡುವವರೆಗೂ ಇಟ್ಟುಕೊಳ್ಳುವುದರಿಂದ, ಇದಕ್ಕೆ ಭದ್ರತೆಯಾಗಿ ರೂ **15000/-** ಭದ್ರತಾ ಠೇವಣಿ ನೀಡಬೇಕು (ಭದ್ರತಾ ಠೇವಣಿಗೆ ಬಡ್ಡಿ ನೀಡಲಾಗುವುದು ).
9. ಅಭ್ಯರ್ಥಿಯ ಉತ್ತಮ ಗುಣ ನಡತೆಯನ್ನು ಬ್ಯಾಂಕಿಗೆ ಅವರ ಸೇವೆಯ ಬಗ್ಗೆ ಭರವಸೆ ನೀಡಬಲ್ಲ ಇಬ್ಬರು ವ್ಯಕ್ತಿಗಳಿಂದ ಧೃಡೀಕರಣ ಪತ್ರ

ವೇತನ ಮತ್ತು ಪ್ರೋತ್ಸಾಹ ಧನ :

- ನಿಶ್ಚಿತ ವೇತನ : ಪ್ರತಿ ತಿಂಗಳಿಗೆ ರೂ **18,000/-**

  ಪ್ರೋತ್ಸಾಹ ಧನ**:**
- ಮೋಟಾರ ಸೈಕಲ್ ಇಂಧನ ವೆಚ್ಚ: ಒಂದು ಲೀಟರ ಪೆಟ್ರೋಲ್ ಗೆ ಸರಾಸರಿ **40** ಕೀ.ಮಿ ದೂರ ಕ್ರಮಿಸುವ ಆಧಾರದ ಮೇಲೆ ವೆಚ್ಚದ ಮರುಪಾವತಿ. ವಾಹನ ನಿರ್ವಹಣಾ ವೆಚ್ಚ ಪ್ರತಿ ತಿಂಗಳಿಗೆ ರೂ **500/-**
- ಇಲೆಕ್ಟ್ರಿಕ್ ವಾಹನ ಹೊಂದಿರುವವರಿಗೆ ಪ್ರತಿ ತಿಂಗಳು ರೂ **1500/-** ನಿರ್ವಹಣಾ ವೆಚ್ಚ
- ದಿನ ನಿತ್ಯದ ಖರ್ಚು ವೆಚ್ಚ ರೂ 1**00/-** (ಕರ್ತವ್ಯಕ್ಕೆ ಹಾಜರಾದ ದಿನಗಳಲ್ಲಿ)
- ಸಾಲ ಮರುಪಾವತಿಯ ಮೇಲೆ ಪ್ರೋತ್ಸಾಹ ಧನ : ಪ್ರತಿ ದಿನದ ಸಾಲ ವಸೂಲಿಯ ಒಟ್ಟು ಮೊತ್ತದ ಮೇಲೆ: 2%.

## ಬ್ಯಾಂಕಿಂಗ್ ಸೇವಾ ಪೂರೈಕೆದಾರ ಸಿಬ್ಬಂದಿಯ ಪ್ರಮುಖ ಜವಾಬ್ದಾರಿ ಮತ್ತು ಕರ್ತವ್ಯಗಳು

1. ಬ್ಯಾಂಕಿಂಗ್ ಸೇವಾ ಪೂರೈಕೆದಾರರ ಸೇವೆಗಳು ಸುಕೋ ಬ್ಯಾಂಕು ಮತ್ತು ಸೇವಾದಾರರು ಸಹ ಸಮ್ಮತಿಯಿಂದ ಮಾಡಿಕೊಂಡಿರುವ ಒಪ್ಪಂದ ದಸ್ತಾವೇಜಿನಲ್ಲಿರುವ ಷರತ್ತುಗಳಿಗೆ ಬದ್ಧವಾಗಿರುತ್ತವೆ.

2. ಬ್ಯಾಂಕಿಂಗ್ ಸೇವಾ ಪೂರೈಕೆದಾರರ ಮೂಲಕ ಗ್ರಾಹಕರಿಗೆ ನೀಡಲ್ಪಡುವ ಸೇವೆಗಳು , ಆರ್ಥಿಕ ಯೋಜನೆಗಳು ಮತ್ತು ಅವರ ಕರ್ತವ್ಯ, ಜವಾಬ್ದಾರಿ ಹಾಗೂ ಕಾರ್ಯ ಚಟುವಟಿಕೆಗಳು ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕಿಂಗ್ ಸಂಸ್ಥೆಗಳಿಗೆ ನೀಡಿರುವ/ನೀಡಲ್ಪಡುವ ಆದೇಶಗಳಿಗೆ ಅನುಗುಣವಾಗಿರುತ್ತವೆ.
3. ಬ್ಯಾಂಕಿಂಗ್ ಸೇವಾ ಪೂರೈಕೆದಾರರು ಬ್ಯಾಂಕಿನ ಯೋಜನಾ ಸಂಯೋಜನಾ ಅಧಿಕಾರಿ /ಶಾಖೆಯ ವ್ಯವಸ್ಥಾಪಕ/ಅಧಿಕಾರಿ ಮತ್ತು ಸುಕೋ ಬ್ಯಾಂಕ್ ಪ್ರಧಾನ ಕಚೇರಿಯ ನಿರ್ದೇಶನ ಮತ್ತು ಮಾರ್ಗದರ್ಶನದಲ್ಲಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ.
4. ಬ್ಯಾಂಕಿಂಗ್ ಸಂಸ್ಥೆಗಳು ಸಿಬ್ಬಂದಿಯ ಪ್ರಾಮಾಣಿಕತೆ ಹಾಗು ಗ್ರಾಹಕರ ವಿಶ್ವಾಸಗಳ ತಳಹದಿಯ ಮೇಲೆ ಕಾರ್ಯ ನಿರ್ವಹಿಸುವುದರಿಂದ ಪ್ರಾಮಾಣಿಕತೆ , ಶಿಸ್ತು , ಸಂಯಮ ಮತ್ತು ಸೇವಾ ಮನೋಭಾವನೆಯು ಅಗತ್ಯವಾಗಿರುವುದನ್ನು ಸದಾ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುದು ಮುಖ್ಯವಾಗಿದೆ.
5. ಬ್ಯಾಂಕಿನಿಂದ ಆಯಾ ಸೇವಾ ಪೂರೈಕೆದಾರರಿಗೆ ಆಯಾ ತಾಲೂಕು /ನೆರೆಯ ತಾಲೂಕು /ನೆರೆಯ ಜಿಲ್ಲೆಯಲ್ಲಿರುವ ಗ್ರಾಹಕರ ನಿರ್ದಿಷ್ಟ ಗ್ರಾಮ/ಪಟ್ಟಣ /ನಗರವನ್ನುವಹಿಸಿಕೊಡಲಾಗುವುದು.
6. ನಿಗದಿಪಡಿಸಿದ ಸ್ಥಳಗಳಲ್ಲಿರುವ ಬ್ಯಾಂಕಿನ ನಿರ್ದಿಷ್ಟ ಗ್ರಾಹಕರಿಗೆ ಸೇವೆಗಳನ್ನು ಪೂರೈಸಲು ಬ್ಯಾಂಕಿಂಗ್ ಸೇವಾ ಪೂರೈಕೆದಾರರಿಗೆ ವಹಿಸಲಾಗುವುದು
7. ಪ್ರತಿ ವಾರವೂ ಸೋಮವಾರದಿಂದ ಶನಿವಾರದವರೆಗೆ ಪೂರ್ವಭಾವಿಯಾಗಿ ಯೋಜಿತ ನಿಗದಿತ ಸ್ಥಳಗಳಿಗೆ ಮತ್ತು ಗ್ರಾಹಕರಿಗೆ ಭೇಟಿ ನೀಡಿ ಅವರು ತಮ್ಮ ಸಾಲದ ಖಾತೆಗೆ ಜಮಾ ಮಾಡಬೇಕಿರುವ ಮರುಪಾವತಿ ಹಣವನ್ನು ಬ್ಯಾಂಕಿನ ಆಪ್ ಮೂಲಕ ಸ್ವೀಕರಿಸುವುದು ಮತ್ತು ಕಾಲ, ಕಾಲಕ್ಕೆ ಬ್ಯಾಂಕಿನ ನಿರ್ದೇಶನಕ್ಕೆ ಅನುಗುಣವಾಗಿ ಗ್ರಾಹಕರಿಗೆ ಇತರ ಸೇವೆಗಳನ್ನು ಪೂರೈಸುವುದು.
8. ಆಯಾ ದಿನದ ಕ್ಷೇತ್ರ ಭೇಟಿಯ ನಂತರ ಅಗತ್ಯವಿರುವಾಗ ಬ್ಯಾಂಕಿನ ಶಾಖೆಗೆ ಭೇಟಿ ನೀಡಿ ಯೋಜನಾ ವ್ಯವಸ್ಥಾಪಕರು/ ಶಾಖೆಯ ವ್ಯವಸ್ಥಾಪಕರು/ಅಧಿಕಾರಿಗೆ ಅಗತ್ಯ ವರದಿಯನ್ನು ಒಪ್ಪಿಸುವುದು .
9. ಗ್ರಾಹಕರಿಗೆ ಖಾತೆಗಳಿಗೆ ಸಂಬಂಧಿತ ವಿಷಯ ಕುರಿತು ಚರ್ಚೆ, ಪರಿಶೀಲನೆ, ಗ್ರಾಹಕರಿಗೆ ಅಗತ್ಯವಿರುವ ಮಾಹಿತಿ ಪೂರೈಕೆ ಇತ್ಯಾದಿ ಕರ್ತವ್ಯಗಳಿಗಾಗಿ ವಾರದಲ್ಲಿ ಕನಿಷ್ಠ ಒಂದು ದಿನವಾದರೂ ಬ್ಯಾಂಕಿನ ಶಾಖೆಯಲ್ಲಿ ಹಾಜರಿದ್ದು ಸೇವೆ ಪೂರೈಸುವುದು ಕಡ್ಡಾಯವಾಗಿರುತ್ತದೆ.
10. ಬ್ಯಾಂಕಿನ ಸಾರ್ವತ್ರಿಕ ರಜಾ ದಿನಗಳಂದು (ರವಿವಾರ ಮತ್ತು ನಿಗದಿತ ಶನಿವಾರ ಸೇರಿದಂತೆ) ಸೇವಾ ಪೂರೈಕೆದಾರರು ಗ್ರಾಹಕರಿಂದ ಅವರ ಖಾತೆಗಳ ವ್ಯವಹಾರಕ್ಕೆ ಸಂಬಂಧಿತ ಹಣ ಸ್ವೀಕರಿಸಲು ನಿಷೇಧಿಸಲಾಗಿದೆ.
11. ನಮ್ಮ ಬ್ಯಾಂಕಿನ ಗ್ರಾಹಕರಲ್ಲಿ ಜಂಟಿ ಹೊಣೆಗಾರಿಕೆ ಗುಂಪಿನ ಸದಸ್ಯರೆಲ್ಲರೂ ದುಡಿಯುವ ಮಹಿಳೆಯರೇ ಆಗಿರುವುದರಿಂದ, ಅವರು ತಮ್ಮ ದುಡಿಮೆಗಾಗಿ ಬೇರೆಡೆ ತೆರಳುವ ಮೊದಲೇ, ಅಂದರೆ ಪ್ರಾತಃಕಾಲದ 7 ಗಂಟೆಗೆ ಪೂರ್ವ ನಿಗದಿತ ಸ್ಥಳದಲ್ಲಿ ಹಾಜರಾಗಿದ್ದು ಗ್ರಾಹಕರ ಭೇಟಿಯನ್ನು ಮಾಡುವುದು ಅಗತ್ಯವಿದೆ.
12. ಪ್ರತಿ ತಿಂಗಳ 3 ನೇಯ ದಿನಾಂಕದ ಒಳಗಾಗಿ ತಾತ್ಕಾಲಿಕ ಮತ್ತು ಅಂತಿಮ ಪ್ರವಾಸ ಕುರಿತು ನಿಗದಿತ ವಿವರವಾದ ವರದಿಯನ್ನು ಮೇಲಿನ ಅಧಿಕಾರಿಗಳಿಗೆ ತಲುಪಿಸಬೇಕು. ದಿನ ನಿತ್ಯದ ಪ್ರವಾಸ ಮತ್ತು ಗ್ರಾಹಕರ ಭೇಟಿಗಳು ಮೇಲಿನ ಅಧಿಕಾರಿಗಳು ಅನುಮೋದಿಸುವ ಯೋಜನೆಗೆ ಅನುಗುಣವಾಗಿ ಪಾಲಿಸುವುದು ಕರ್ತವ್ಯವಾಗಿದೆ.
13. ಪ್ರತಿ ತಿಂಗಳು ಸೇವಾ ಪೂರೈಕೆದಾರ ಸಿಬ್ಬಂದಿಯು ನೀಡುವ ತಿಂಗಳ ಪ್ರವಾಸದ ಅಂತಿಮ ವರದಿಯು ದಿನ ನಿತ್ಯದ ವೆಚ್ಚದ ಮತ್ತು ಇಂಧನ ವೆಚ್ಚದ ಮರುಪಾವತಿ ಹಾಗೂ ಸಾಲ ಮರುಪಾವತಿಯಲ್ಲಿ ಮಾಡಿರುವ ಪ್ರಗತಿಯ ಆಧಾರದ ಮೇಲೆ ಪ್ರೋತ್ಸಾಹ ಧನವನ್ನು ಪಾವತಿಸಲಾಗುವುದು.
14. ಪ್ರತಿ ತಿಂಗಳು ಮತ್ತು ಅಗತ್ಯವಿರುವಾಗ ಬ್ಯಾಂಕು ಏರ್ಪಡಿಸುವ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿದ್ದು ಸಕ್ರಿಯವಾಗಿ ಪಾಲ್ಗೊಳ್ಳಬೇಕು

- ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ  ತಲುಪಿಸಲು  ಕೊನೆಯ ದಿನಾಂಕ **:15-04-2026**
- ಅರ್ಜಿ ಸಲ್ಲಿಸಲು ವಿಳಾಸ (ಅರ್ಜಿಯನ್ನು ರಿಜಿಸ್ಟರ್ಡ್ ಪೋಸ್ಟ್ ಅಥವಾ ಕೊರಿಯರ್ ಸೇವೆಯ ಮೂಲಕ ಕಳಿಸಿ)

ಬ್ಯಾಂಕಿಂಗ ಸೇವಾ  ಪ್ರತಿನಿಧಿಯ ಸ್ಥಾನಕ್ಕಾಗಿ ಅರ್ಜಿ

**(** ಲಕೋಟೆಯ ಮೇಲೆ ನಮೂದಿಸಿ **)**

ಇವರಿಗೆ
ವ್ಯವಸ್ಥಾಪಕ  ನಿರ್ದೇಶಕರು
ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್
ಪ್ರಧಾನ ಕಚೇರಿ
ಮೋಕಾ ರಸ್ತೆ **,** ಗಾಂಧಿ ನಗರ**,**
ಬಳ್ಳಾರಿ

SUCO BANK

ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್

ಪ್ರಧಾನ ಕಚೇರಿ

ಮೋಕಾ ರಸ್ತೆ, ಗಾಂಧಿನಗರ, ಬಳ್ಳಾರಿ

| |
|---|
| ಇಲ್ಲಿ ಅಭ್ಯರ್ಥಿಯ  ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ<br>ಲಗತ್ತಿಸಿ |

ಬ್ಯಾಂಕಿಂಗ ಸೇವಾ ಪ್ರತಿನಿಧಿಗಳ ಆಯ್ಕೆಗಾಗಿ ಅರ್ಜಿ

| ಕ್ರಮ ಸಂಖ್ಯೆ | ಅರ್ಜಿದಾರ ಅಭ್ಯರ್ಥಿಯ ಮಾಹಿತಿಯ ಮಾನದಂಡಗಳು | ಅರ್ಜಿದಾರರು ಸಲ್ಲಿಸಿದ ವಿವರಗಳು |
|---|---|---|
| 1 | ಪೂರ್ಣ ಹೆಸರು ಮತ್ತು ವಯಸ್ಸು | |
| 2 | ತಂದೆಯ ಹೆಸರು | |
| 3 | ಮೂಲ ವಾಸ ಸ್ಥಳ (ನೇಟಿವ್) ಮತ್ತು ವಿಳಾಸ (ತಾಲ್ಲೂಕು ಮತ್ತು ಜಿಲ್ಲೆ ನಮೂದಿಸಿ ) | |
| 4 | ಪ್ರಸ್ತುತ ವಾಸವಾಗಿರುವ ಸ್ಥಳ ಮತ್ತು ವಿಳಾಸ | |
| 5 | ಜನ್ಮ ದಿನಾಂಕ | |
| 6 | ವ್ಯಕ್ತಿಗತ ಆಧಾರ ಸಂಖ್ಯೆ | |
| 7 | ಎಸೆಸೆಲ್ಸಿ /ಪಿಯುಸಿ /ಪದವಿ ತೇರ್ಗಡೆಯಾದ ವರ್ಷ | |
| 8 | ಶಾಲೆ/ಕಾಲೇಜಿನ ಹೆಸರು ಮತ್ತು ಸ್ಥಳ | |
| 9 | ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆಯೇ ?<br><br>ಇಂಗ್ಲಿಷ್ ಓದಲು ಹಾಗೂ ಬರೆಯಲು ಬರುತ್ತದೆಯೇ ? | |
| 10 | ಈ ಮೊದಲು ಸೇವೆ ಸಲ್ಲಿಸಿದ್ದರೆ, ಅವುಗಳ ಸಂಕ್ಷಿಪ್ತ ವಿವರ (ನಿರ್ವಹಿಸಿದ ಹುದ್ದೆ, ಸಂಸ್ಥೆ ಮತ್ತು ಅವಧಿ) | |
| 11 | ಮೋಟಾರ ವಾಹನ ಚಾಲನಾ ಲೈಸೆನ್ಸ್ ಚಾಲ್ತಿಯಲ್ಲಿರುವುದೇ ? (ಅರ್ಜಿ ಸಲ್ಲಿಸಲು ಮೋಟಾರ ಸೈಕಲ್ ಹೊಂದಿರುವುದು ಕಡ್ಡಾಯವಾಗಿದೆ ) | |
| 12 | ನಿಮ್ಮನ್ನು ಬ್ಯಾಂಕಿಂಗ್ ಸೇವಾ ಪ್ರತಿನಿಧಿಯಾಗಿ ಪರಿಗಣಿಸಲು ಅನುಮೋದಿಸಿ, ಬ್ಯಾಂಕಿಗೆ ಶಿಫಾರಸ್ಸು ಮಾಡಿರುವ ಇಬ್ಬರು ಗೌರವಾನ್ವಿತ ವ್ಯಕ್ತಿಗಳ ಹೆಸರು ಮತ್ತು ವಿಳಾಸ<br>ಆಯ್ಕೆ ಪ್ರಕ್ರಿಯೆ ನಂತರ ಸೇವೆಗೆ ಸೇರುವಾಗ ಅವರ KYC ದಾಖಲೆ ಮತ್ತು ವ್ಯಕ್ತಿಗತ ಶಿಫಾರಸ್ಸು ನೀಡುವುದು | 1)<br><br><br><br>2) |

ನನ್ನನ್ನು ಬ್ಯಾಂಕಿಂಗ್ ಸೇವಾ ಪ್ರತಿನಿಧಿಯಾಗಿ ಆಯ್ಕೆ ಮಾಡುವ ತೀರ್ಮಾನವು ಬ್ಯಾಂಕಿನ ಅಧಿಕಾರ ಮತ್ತು ನಿರ್ಧಾರದ ವ್ಯಾಪ್ತಿಯಲ್ಲಿದ್ದು ನಾನು ಈ ಕೆಳಗಿನ ವಿವರಗಳಿಗೆ ಬದ್ದವಾಗಿರುತ್ತೇನೆ.

1) ಮೇಲೆ ನೀಡಿದ ವಿವರಗಳು ಸತ್ಯವಾಗಿದ್ದು ಅವುಗಳಿಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ನಾನು ಮೌಖಿಕ ಸಂದರ್ಶನಕ್ಕೆ ಹಾಜರಾಗುವ ಸಂದರ್ಭದಲ್ಲಿ ಪ್ರಸ್ತುತ ಪಡಿಸುತ್ತೇನೆ.
2) ಬ್ಯಾಂಕಿಂಗ್ ಸೇವಾ ಪ್ರತಿನಿಧಿಗಳ ಕರ್ತವ್ಯ ಹಾಗೂ ಜವಾಬ್ದಾರಿಯ ಬಗ್ಗೆ ಮನನ ಮಾಡಿಕೊಂಡಿರುತ್ತೇನೆ.
3) ಸೇವಾ ಪ್ರತಿನಿಧಿಯಾಗಿ ಆಯ್ಕೆಯಾದಲ್ಲಿ, ಸೇವೆ ಸಲ್ಲಿಸಲು ಅಗತ್ಯವಿರುವ ರೂ **15000** ಗಳನ್ನು ಭದ್ರತಾ ಠೇವಣಿಯಾಗಿ ನೀಡಲು ಸಮ್ಮತಿಯಿದೆ.

ಸ್ಥಳ **:**

ದಿನಾಂಕ **:** ಅಭ್ಯರ್ಥಿಯ ಸಹಿ